ವಿಕ್ರಮನನ್ನು ನಿಕೃಷ್ಟವಾಗಿ ನೋಡಿದರೂ, ನಿರ್ಲಕ್ಷಿಸಿದರೂ ಮಾನಸಿಕವಾಗಿ ಚದುರದೆ ಸಮಾಜದಲ್ಲಿ ತನ್ನದೇ ಛಾಪು ಮೂಡಿಸಲು ಗುಪ್ತಾ ಬಹಳಷ್ಟು ಸಹಕಾರ ನೀಡಿದ್ದ. ಈಗಲೂ ಅವನು ಅಷ್ಟೇ ಸಹನೆಯಿಂದ ಇರುವುದು ಎಷ್ಟೋ ಬಾರಿ ಕೌತುಕವನ್ನು ಮೂಡಿಸುತ್ತಿತ್ತು. ಬಹುಶಃ ರುಕ್ಮಿಣಿ ಅಂದು ಗುಪ್ತಾನ ಕೈ ಹಿಡಿದು ಅಳುವಾಗ ಒಂದುವೇಳೆ ಅವನೂ ಅವಳ ಕೈಹಿಡಿದು ಧೈರ್ಯ ತುಂಬಿ ಸಾಂತ್ವನ ಹೇಳಿದ್ದಿದ್ದರೆ ಏನಾಗುತ್ತಿತ್ತು ಎಂಬುದು ಸ್ವತಃ ರುಕ್ಮಿಣಿಗೇ ಗೊತ್ತಿರಲಿಲ್ಲ. ಅದೆಂತಹ ದುರ್ಬಲ ಕ್ಷಣವಾಗಿತ್ತು! ಬೇರೆ ಯಾರನ್ನೋ ಪ್ರೀತಿಸಬೇಕು ಎನ್ನುವುದಕ್ಕಿಂತ ವಿಕ್ರಂನಿಂದ ದೂರವಾಗಬೇಕು ಎಂಬ ಬಲವಾದ ತುಡಿತವಿದು, ಬೇರೇನಲ್ಲ ಎಂದು ತಿಳಿದಿದ್ದೇ ರುಕ್ಮಿಣಿ ಮತ್ತದೇ ಜೀವನಕ್ಕೆ, ಸಿಗರೇಟಿನ ದೊಂದಿಗಳು ಮನಸ್ಸನ್ನು ಸುಡುವ ರಾತ್ರಿಗಳಿಗೆ ಒಗ್ಗಿಕೊಂಡುಬಿಟ್ಟಿದ್ದಳು. ಗುಪ್ತಾ ಬರೀ ಕೆಲವು ಕ್ಷಣಕ್ಕೆ ಬಂದು ಹೋದ ಸಂಚಾರಿ ಭಾವ! ಸ್ಥಾಯಿಯಾಗುಳಿದವನು ವಿಕ್ರಂ ಮಾತ್ರ... ಈಗ ಆಕ್ಸಿಜನ್ ಮಾಸ್ಕಿನ ಮೂಲಕ ಉಸಿರು ಹಿಡಿದುಕೊಂಡಿರುವ ವಿಕ್ರಂ.

ವಿಕ್ರಮನ ಪಾಯಿಜಾಮ ಜುಬ್ಬವನ್ನು ರುಕ್ಮಿಣಿಯ ಕೈಲಿಡುತ್ತ, 'ಮೈಲ್ಡ್ ಅಟ್ಯಾಕ್‌ನಿಂದಾಗಿ ಎಡಬದಿಯ ದೇಹ ಸ್ವಾಧೀನ ಕಳೆದುಕೊಂಡಿದೆಯಂತೆ, ಜೀವಕ್ಕೇನು ಅಪಾಯವಿಲ್ಲವಂತೆ. ಹಾಸ್ಪಿಟಲ್ ತಲುಪುತ್ತಲೇ ನಿಮ್ಮನ್ನು ಡಾ. ಕೋಮಲ್ ಬರಹೇಳಿದ್ದಾರೆ' ಎಂದ ಗುಪ್ತಾ.

ಎಂತೆಂತಹ ಕಷ್ಟಗಳನ್ನೆದುರಿಸಿ, ಕಾಲೆಳೆಯುವ ಶತ್ರುಗಳನ್ನು ಸಾಧನೆಯಿಂದಲೇ ಸದೆಬಡಿದ ಮನುಷ್ಯ ಈಗ ಸ್ವಾಧೀನ ಕಳೆದುಕೊಂಡು ಹಾಸಿಗೆಗೆ ಒರಗಿದ್ದು ನೋಡಿ ಸಂಕಟವಾಗದೇ ಇರಲಿಲ್ಲ ರುಕ್ಮಿಣಿಗೆ. ಜಗತ್ತನ್ನೇ ಗೆದ್ದವನು ಸಂಶಯ ಗೆಲ್ಲಲಾಗದೆ ಸೋತ, ನಾನು ನನ್ನ ಅಹಂ ಬಿಡಲಾಗದೆ ಸೋತೆ! ಎಂದು ವಿಕ್ರಮನನ್ನು ನೋಡುತ್ತಾ ಎರಡು ಹನಿ ಕಣ್ಣೀರಾದಳು.

'ಗುಪ್ತಾ, ವಿರಾಜ್ ಹೆಸರಿನಲ್ಲಿ ಇದ್ದ ಆಸ್ತಿಯ ಕಾಗದ ಪತ್ರಗಳನ್ನೆಲ್ಲಾ ಆದಷ್ಟು ಬೇಗ ನನಗೆ ತಲುಪಿಸಬೇಕು. ಹಳೆಯ ಫೈಲ್ಸ್ ಓಪನ್ ಮಾಡಿ ವಿರಾಜ್ ಹೆಸರಿನಲ್ಲಿದ್ದ ಬ್ಯಾಂಕ್ ಬ್ಯಾಲೆನ್ಸ್ ಡಿಟೇಲ್ಸ್ ಕೂಡ ಅರ್ಜೆಂಟ್ ಆಗಿ ಬೇಕು ನನಗೆ' ಎಂದು ಹೇಳಿದ ರುಕ್ಮಿಣಿಯ ಮಾತಿಗೆ ತಲೆ ಅಲ್ಲಾಡಿಸುವುದು ಬಿಟ್ಟರೆ ಬೇರೇನೂ ಹೊಳೆಯಲಿಲ್ಲ ಗುಪ್ತನಿಗೆ. ವೆಂಟಿಲೇಟರ್‌ನಲ್ಲಿರುವ ಗಂಡನನ್ನು ನೋಡಿ ಹೆಂಡತಿ ಆಡುವ ಮಾತು ಇದಾ, ಆಸ್ತಿ ವ್ಯವಹಾರ ಈಗಲೇ ಆಗಬೇಕಾ ಎಂದು ಅಸಡ್ಡೆ ತೋರಿಸುವವನಂತೆ ಗುಪ್ತಾ 'ಹಮ್ಮ್' ಎಂದು ಹೊರಟ.

ತನ್ನ ಕೈಸೇರಿದ್ದ ವಿಕ್ರಮನ ಜುಬ್ಬಾ ಪಾಯಿಜಾಮವನ್ನು ತಡವುತ್ತ ಪೂವಿ ಅನಾಥಾಶ್ರಮ ಎಂದರೆ ಪೂರ್ಣಿಮಾ–ವಿರಾಜ್ ಅಂತಲೇ ಇರಬೇಕು ಎಂದು ಯೋಚಿಸುತ್ತಿರುವಾಗಲೇ ಪಾಯಿಜಾಮದ ಕಾಲು ಸಂದಿಯಲ್ಲಿ ಸಣ್ಣಗೆ ಕತ್ತರಿಸಿದ್ದನ್ನು ಕಂಡು ಎಷ್ಟೋ ವರ್ಷಗಳಿಂದ ಅದುಮಿಟ್ಟ ವಿಕ್ರಮನ ಮೇಲಿನ ಪ್ರೀತಿ ಉಕ್ಕುಕ್ಕಿ ಬಂತು. ಪಾಯಿಜಾಮದ ಲಾಡಿಯ ಹುಸಿ ಗಂಟನ್ನು ಬಿಡಿಸಲೆತ್ನಿಸುತ್ತಾ ಗುಪ್ತನಿಗೆ ಫೋನಾಯಿಸಿದ ರುಕ್ಮಿಣಿ, 'ಬರುವಾಗ ಬಿಳಿ ನೂಲುಂಡೆ ಸೂಜಿಯನ್ನು ಮರೆಯದೆ ತನ್ನಿ ಪ್ಲೀಸ್...' ಎಂದಳು.



### ಛಾಯಾ ಭಟ್

ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಕತೆ, ಲೇಖನಗಳು ಕನ್ನಡದ ದೈನಿಕ ಹಾಗೂ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನವರು.